

# ಗೂಳಿಕಾಳಗದ ಗಟ್ಟಿಗಿತ್ತಿಯರು

ಗಂಡುಗಲಿ, ಜಗಜಟ್ಟಿ, ವೀರಾಧಿವೀರ... ಗಂಡಿನ ಪರಾಕ್ರಮದ ವರ್ಣನೆಗೆ ಸೀಮಿತವಾದ ಈ ಪದಗಳನ್ನು ಹೆಣ್ಣಿಗೆ ಅನ್ವಯಿಸಿ ಹೇಳಬಹುದೆ? ಮೆಕ್ಸಿಕೊದ 'ಗೂಳಿಕಾಳಗ'ದಲ್ಲಿ ಕೊಬ್ಬಿದ ಗೂಳಿಗಳೊಂದಿಗೆ ಸೆಣಸಾಟಕ್ಕಿಳಿಯುವ ಹೆಣ್ಣುಮಕ್ಕಳನ್ನು ನೋಡಿದರೆ ಮೈ ಜುಮ್ಮೆನ್ನುತ್ತದೆ, ಅವರನ್ನು ಬಣ್ಣಿಸಲು ಯಾವ ಪದಗಳೂ ಸಾಲದೆನ್ನಿಸುತ್ತದೆ. ರಟ್ಟೆಬಲದೊಂದಿಗೆ ಆತ್ಮಬಲವನ್ನೂ ಸೇರಿ ಸೆಣಸುವ ಮಹಿಳಾ ಬುಲ್‌ಫೈಟರ್‌ಗಳ ಕಾಳಗದ ಪಟ್ಟುಗಳು ರೋಮಾಂಚನ ಉಂಟುಮಾಡುತ್ತವೆ.

■ ಎಸ್ಸೆನ್

ಲಕ್ಷಾಂತರ ಜನರಿಂದ ಸುತ್ತುವರಿದಿದ್ದ ಮೆಕ್ಸಿಕೊದ 'ಬುಲ್‌ರಿಂಗ್' ಜನರ ಕೂಗು, ಹೇಷಾರವಗಳಿಂದ ತುಂಬಿಕೊಂಡಿತ್ತು. ಮೆಟ್ಟಿದರೆ ಮಣ್ಣು ಏಳುವಂಥ ಆ ವಿಶಾಲ ಮೈದಾನದಲ್ಲಿ ಇದ್ದದ್ದು ಇಬ್ಬರೇ. ರೋಷಾವೇಷದ ಗೂಳಿ. ಬುಲ್‌ಫೈಟರ್ ಸ್ಯಾನ್ ಮಾರ್ಟಿನ್!

ಜನರ ಕೇಕೆಯಿಂದ ಕೆರಳಿದ ಗೂಳಿ, ಕಾಲು ಕೆರೆದುಕೊಂಡು ಬುಲ್‌ಫೈಟರ್‌ನತ್ತ ನುಗ್ಗಲು ಅಣಿಯಾಗುತ್ತಿತ್ತು. ಇತ್ತ ತನ್ನತ್ತ ನುಗ್ಗಲಿರುವ ಗೂಳಿಯನ್ನು ಮಣಿಸಲು ಸ್ಯಾನ್ ಕೂಡ ವಿಭಿನ್ನ ಭಾವ ಭಂಗಿಗಳಿಂದ ಮೈ ಸೆಟೆದು ಸಿದ್ಧವಾಗಿದ್ದರು.

ಕತ್ತಿ ಹಿಡಿದು ಗೂಳಿಯೊಂದಿಗೆ ಕೆಲವು ನಿಮಿಷಗಳ ಮೈ ಜುಮ್ಮೆನಿಸುವಂಥ ಹೋರಾಟ ನಡೆದಿತ್ತಷ್ಟೆ. ಅನಾಮತ್ತಾಗಿ ತಿವಿತಕ್ಕೆ ಒಳಗಾದರು ಸ್ಯಾನ್. ಮೈತುಂಬಾ ರಕ್ತ ಚೆಲ್ಲಿದರೂ ಹೋರಾಟ ಬಿಡದ ಸ್ಯಾನ್ ಅವರನ್ನು ಕೊನೆಗೆ ಆಸ್ಪತ್ರೆಗೆ ಸೇರಿಸಲಾಯಿತು. ಕೆಲದಿನಗಳಲ್ಲೇ ಮತ್ತೆ ಬುಲ್‌ರಿಂಗ್ ಪ್ರವೇಶಿಸಲು ಸಿದ್ಧವಾಗಿದ್ದರು ಅವರು. ಆ ಸಮಯದಲ್ಲಿ ಅವರು ನೀಡಿದ್ದ ಹೇಳಿಕೆಯೊಂದು ಇಡೀ ವಿಶ್ವ ಅವರತ್ತ ನೋಡುವಂತೆ ಮಾಡಿತ್ತು.

'ಗೂಳಿತಿವಿತ ಎನ್ನುವುದು ಬುಲ್‌ಫೈಟರ್‌ಗಳಿಗೆ ಕಟ್ಟಿಟ್ಟ ಬುತ್ತಿ. ಆ ಅನುಭವದಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಆದರೆ ಮಹಿಳಾ ಬುಲ್‌ಫೈಟರ್‌ಗಳಿಗೆ ಅದಕ್ಕಿಂತ ಹೆಚ್ಚು ಆಘಾತವಾಗುವುದು ಲಿಂಗಭೇದದ